ಶ್ರೀಮತಿ ಚಂದ್ರಪ್ರಭಾ ಅರಸ್.—ವಸತಿ ಸೌಕರ್ಯಕ್ಕೋಸ್ಕರವಾಗಿ ಇನ್ನು ಹೆಚ್ಚಿನ ಕಟ್ಟಡಗಳನ್ನು ಕಟ್ಟಿಸಬೇಕಾಗಿದೆ ಎಂಬುದನ್ನು ನಾವು ಸಹ ತಿಳಿದುಕೊಂಡಿದ್ದೇವೆ. ಸ್ಥಳೀಕರು ಅರ್ಧ ಭಾಗ ಹಣವನ್ನು ಕೊಟ್ಟರೆ ಮಿಕ್ಕ ಹಣವನ್ನು ಎನ್.ಆರ್.ಇ.ಪಿ. ಮುಖಾಂತರವಾಗಿ ವೆಚ್ಚ ಮಾಡಿ ಕೆಲವು ಕಡೆಗಳಲ್ಲಿ ಕಟ್ಟಡವನ್ನು ಕಟ್ಟಿಕೊಂಡು ಬಂದಿದ್ದೇವೆ. ಕೆಲವು ಭಾಗದಲ್ಲಿ ಮಾತ್ರ ಇದನ್ನು ಮಾಡಿದ್ದೇವೆ. ಮಿಕ್ಕ ಕಡೆಗಳಲ್ಲಿ ಇದು ಆಗಿಲ್ಲ. ಕೆಲವು ಕಡೆಗಳಲ್ಲಿ ಸ್ಥಳೀಯ ಜನವಂತಿಕೆಯನ್ನು ಕಲೆಕ್ಟ್ ಮಾಡದೇ ಇರುವುದರಿಂದ ಈ ಕೆಲಸ ಆಗಿಲ್ಲ, ಆದರೂ ಕೂಡ ನಾವು ಕ್ರಮಬದ್ಧವಾದ ರೀತಿಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಶಾಲೆಗಳನ್ನು ಸ್ಥಾಪನೆ ಮಾಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಪ್ರಪ್ರಥಮವಾಗಿ ಸ್ಥಳಾವಕಾಶವನ್ನು ಕಲ್ಪಿಸಿಕೊಡಬೇಕು ಎನ್ನುವ ಬಗ್ಗೆ ನಾವು ಈಗಾಗಲೇ ಯೋಜನೆಯನ್ನು ಹಾಕಿಕೊಂಡಿದ್ದೇವೆ, ಅದರ ಬಗ್ಗೆ ಈಗಾಗಲೇ ಪ್ರಾಮಾಣಿಕವಾದ ಪ್ರಯತ್ನ ನಡೆಯುತ್ತಿದೆ.

ವಿಷಯ:—ಕುದುರೆ ಮುಖ ಕಬ್ಬಿಣ ಅದುರಿನ ಕಂಪನಿ ನಿಗೆವದ ಕಾರ್ಮಿಕ ಕಾಲೋನಿಯಲ್ಲಿ ವಸತಿ ನಿವೇಶನಗೆಳನ್ನು ಖಾಲಿ ಮಾಡಿಸುತ್ತಿರುವುದು.

ಪ್ರ. 155(70) ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು) ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ಪ್ರಮುಖ ಐರನ್ ಓರ್ ಕಂಪನಿ ಲಿಮಿಟೆಡ್ ಮತ್ತು ಹಿಂದೂಸ್ಥಾನ ಸ್ಟೀಲ್ ಕನ್ಸ್ಟ್ರಕ್ಷನ್ ಲಿಮಿಟೆಡ್‌ನ ಆಡಳಿತ ವರ್ಗದವರು ತಮ್ಮ ಕಾರ್ಮಿಕರನ್ನು ಹಿಂದೂಸ್ಥಾನ್ ಸ್ಟೀಲ್ ಕನ್ಸ್ಟ್ರಕ್ಷನ್ ಲಿಮಿಟೆಡ್ ಮತ್ತು ಅವರ ಕಾರ್ಮಿಕರ ಮಧ್ಯೆ ಇರುವ ವಿವಾದವು ಲೇಬರ್ ಕೋರ್ಟ್, ಬೆಂಗಳೂರಿನ ಮುಂದೆ ಇನ್ನೂ ವಿಚಾರಣೆಯಲ್ಲಿ ಇರುವಾಗಲೇ, ಕಾರ್ಮಿಕರ ಕ್ವಾರ್ಟರ್ಸ್‌ಗಳಿಂದ ಹೊರದೂಡಲು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ. ಈ ಕಾನೂನು ಬಾಹಿರ ಕೆಲಸಕ್ಕೆ ಪೋಲೀಸಿನವರ ಸಹಾಯ ಕೊಡಬಾರದೆಂದೂ ಸರ್ಕಾರದವರೇನಾದರೂ ಆದೇಶ ನೀಡಿದ್ದಾರೆಯೇ ?

ಶ್ರೀ ಎಂ. ರಘುಪತಿ.--(ವಾರ್ತಾ, ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು):—ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳ ಪರವಾಗಿ.

ಅ. ಬಂದಿದೆ.

ಆ. ಇಲ್ಲ.

ಶ್ರೀ ಎಂ. ಸೂರ್ಯನಾರಾಯಣರಾವ್.—ಆಡಳಿತ ವರ್ಗದವರಿಗೂ ಮತ್ತು ಕಾರ್ಮಿಕರ ನಡುವಿನ ವಿವಾದ ಇತ್ಯರ್ಥವಾಗುವವರೆಗೂ ಕ್ವಾರ್ಟರ್ಸ್‌ನ್ನು ಖಾಲಿ ಮಾಡಿಕೊಂಡು ಬರುವುದಕ್ಕೆ ಅವರಿಗೆ ಕಷ್ಟವಿರುವುದರಿಂದ, ಆ ವಿವಾದ ಇತ್ಯರ್ಥವಾಗುವವರೆಗಾದರೂ ಪೋಲೀಸಿನವರಿಂದ ಅವರಿಗೆ ರಕ್ಷಣೆ ನೀಡುತ್ತೀರಾ ?

ಶ್ರೀ ಎಂ. ರಘುಪತಿ.—ಕಾರ್ಮಿಕರಿಂದ ಈ ವಿಷಯದಲ್ಲಿ ಲಿಖಿತ ಮೂಲಕವಾಗಿ ಪೋಲೀಸಿನವರಿಗೆ ದೂರು ಕೊಟ್ಟು ತಕ್ಷಣ ಕಾರ್ಮಿಕರಿಗೆ ನಾವು ರಕ್ಷಣೆ ಕೊಡುತ್ತೇವೆ.

ವಿಷಯ:—ಹರಿಜನ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡಿದ ಹಣದ ಬಗ್ಗೆ

ಪ್ರ. 156 (86) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜ್ಯದಲ್ಲಿ ಹಿಂದಿನ ಐದು ವರ್ಷಗಳಲ್ಲಿ ಹರಿಜನ ಕಲ್ಯಾಣಕ್ಕಾಗಿ ಸರ್ಕಾರದವರು ವೆಚ್ಚ ಮಾಡಿದ ಹಣ ಎಷ್ಟು ? ಇದರಿಂದ ಎಷ್ಟು ಕುಟುಂಬಗಳು ಲಾಭ ಪಡೆದಿವೆ ? ಪ್ರತಿ ವರ್ಷದ ತಲಾ ಸರಾಸರಿ ಒಂದು ಕುಟುಂಬಕ್ಕೆ ವೆಚ್ಚ ಮಾಡಿದ ಹಣ ಎಷ್ಟು ;

ಆ. ಸಮಾಜ ಕಲ್ಯಾಣ ಇಲಾಖೆ ಹರಿಜನರ ಕಲ್ಯಾಣಕ್ಕಾಗಿ ಹಿಂದಿನ ಐದು ವರ್ಷಗಳಲ್ಲಿ 251.09 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಇದರಿಂದ 2,56,672 ಕುಟುಂಬಗಳು ಲಾಭ ಪಡೆದಿವೆ. ಪ್ರತಿ ವರ್ಷ ಸರಾಸರಿ 6,500 ರಿಂದ 35,000 ರೂಪಾಯಿಗಳವರೆಗೆ ಒಂದು ಕುಟುಂಬಕ್ಕೆ ವೆಚ್ಚ ಮಾಡಿದೆ.

ಶ್ರೀಮತಿ ಚಂದ್ರಪ್ರಭಾ ಅರಸು.—(ಸಮಾಜ ಕಲ್ಯಾಣ ಮತ್ತು ರೇಷ್ಮೆ) :—

ಶ್ರೀ ಪಿ. ರಾಮಚಂದ್ರರಾವ್.—ಒಂದು ಕುಟುಂಬಕ್ಕೆ 6,500 ರಿಂದ 35,000 ರೂಪಾಯಿಗಳವರೆಗೆ ಒಂದು ಕುಟುಂಬಕ್ಕೆ ವೆಚ್ಚ ಮಾಡುತ್ತಿದ್ದೇವೆಂದು ಹೇಳಿದ್ದೀರಿ, ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅನಕ್ಷರಸ್ಥರೇನಿದ್ದಾರೆ ಅಂಥವರನ್ನು ಐಡೆಂಟಿಫೈ ಮಾಡುವುದಕ್ಕೆ ಒಂದು ಏಜೆನ್ಸಿ ಇದೆ, ಆ ಏಜನ್ಸಿ ಮೂಲಕ ಅಪ್ಲಿಕೇಷನ್ ಬಂದರೆ ಮಾತ್ರ ಈ ಸೌಲಭ್ಯಗಳು ಸಿಗುತ್ತಿದೆ. ಮಿಕ್ಕವರನ್ನು